# ಸುನಿಲ್ ಆಗ್ರೋ ಫುಡ್ಸ್ ಲಿಮಿಟೆಡ್

**CIN:L01111KA1988PLC008861**

ನೊಂದಾಯಿತ ಕಚೇರಿ: ಪ್ಲಾಟ್ ನಂ.39-ಎ2, ಹೊಸಕೋಟೆ ಕೈಗಾರಿಕಾ ಪ್ರದೇಶ, ಚೊಕ್ಕಹಳ್ಳಿ, ಹೊಸಕೋಟೆ, ಬೆಂಗಳೂರು – 562 114. Ph: 080-27971371 / 27971463

Fax: 080-27971538. e-mail: info@sunilagro.in. Website: www.sunilagro.in


## 30ನೇ ವಾರ್ಷಿಕ ಮಹಾಸಭೆಯ ಸೂಚನೆ ಇ-ಮತದಾನ ಮಾಹಿತಿ ಹಾಗು ಪುಸ್ತಕ ಮುಚ್ಚುವಿಕೆ

ಸಂಸ್ಥೆಯ ಮೂವತ್ತನೇ ವಾರ್ಷಿಕ ಮಹಾಸಭೆಯು ಸೆಪ್ಟೆಂಬರ್ 8, 2018, ಶನಿವಾರ ಬೆಳಿಗ್ಗೆ 10:30ಕ್ಕೆ ಬೆಂಗಳೂರಿನ ರೇಸ್ ಕೋರ್ಸ್ ರಸ್ತೆಯಲ್ಲಿರುವ ಭಾರತೀಯ ವಿದ್ಯಾಭವನದಲ್ಲಿ ನಡೆಯಲಿದ್ದು, 2018ರ ಜುಲೈ 30 ದಿನಾಂಕದ ಸೂಚನೆಯಲ್ಲಿ ತಿಳಿಸಲಾಗಿರುವ ವಿಷಯಗಳ ಕುರಿತು ವ್ಯವಹರಿಸಲಾಗುತ್ತದೆ.

ಸೆಬಿ (ಪಟ್ಟಿ ಕಟ್ಟುಪಾಡುಗಳು ಮತ್ತು ಬಹಿರಂಗಪಡಿಸುವ ಅವಶ್ಯಕತೆಗಳು) ನಿಯಮಗಳು, 2015ರ 44ನೇ ನಿಯಮಕ್ಕೆ ಅನುಸರಣೆಯಾಗಿ ಮತ್ತು ಸಂಸ್ಥೆಗಳ (ನಿರ್ವಹಣೆ ಮತ್ತು ಆಡಳಿತ) (ತಿದ್ದುಪಡಿ) ನಿಯಮಗಳು, 2015ರ 20ನೇ ನಿಯಮದೊಂದಿಗೆ ಓದಲಾದ ಕಂಪನಿ ಕಾಯಿದೆಯ ಅನುಚ್ಛೇದ 108ರ ಅನುಸರಣೆಯಲ್ಲಿ ಸಂಸ್ಥೆಯು ಅಂಚೆಯ ಮೂಲಕ ಆಗಸ್ಟ್ 18, 2018ರಂದು ಹಾಜರಾತಿ ಚೀಟಿಯೊಂದಿಗೆ ವಾರ್ಷಿಕ ವರದಿ, ಸೂಚನೆಯನ್ನು ಕಳುಹಿಸಿದ್ದು, ಆರ್‌ಟಿಎ (ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್) ನೊಂದಿಗೆ ನೋಂದಣಿಯಾದ ಎಲ್ಲಾ ಸದಸ್ಯರ ಇ-ಮೇಲ್ ಐಡಿಗೆ ವಿದ್ಯುನ್ಮಾನ ವಿಧಾನದಲ್ಲಿ ಕಳುಹಿಸಲಾಗಿದೆ. ಸಂಸ್ಥೆಯ ಸದಸ್ಯರಿಗೆ ದೂರದ ಇ-ಮತದಾನ ಸೌಲಭ್ಯವನ್ನು ಕಲ್ಪಿಸಿಕೊಡುವುದಕ್ಕಾಗಿ ಸಂಸ್ಥೆಯು ಸೆಂಟ್ರಲ್ ಡೆಪಾಸಿಟರಿ ಸರ್ವೀಸಸ್ ಲಿಮಿಟೆಡ್(ಸಿಡಿಎಸ್‌ಎಲ್) ನ ಸೇವೆಗಳನ್ನು ತೊಡಗಿಸಿಕೊಂಡಿದೆ.

ಇ-ಮತದಾನವು ಐಚ್ಛಿಕವಾಗಿದ್ದು, ಸದಸ್ಯರು ಆಗಸ್ಟ್ 31, 2018ರಂದು ಹೊಂದಿರುವ ಈಕ್ವಿಟಿ ಶೇರುಗಳ ಆಧಾರದ ಮೇಲೆ ಅವರ ಇ-ಮತದಾನ ಹಕ್ಕುಗಳನ್ನು ಪರಿಗಣಿಸಲಾಗುತ್ತದೆ. ದೂರದ ಇ-ಮತದಾನ ಅವಧಿಯು ಸೆಪ್ಟೆಂಬರ್ 5, 2018ರ (ಬುಧವಾರ) ಬೆಳಿಗ್ಗೆ 9:00 ಘಂಟೆಯಿಂದ ಆರಂಭವಾಗಿ ಸೆಪ್ಟೆಂಬರ್ 7, 2018ರ (ಶುಕ್ರವಾರ) ಸಂಜೆ 5:00 ಘಂಟೆಗೆ ಮುಕ್ತಾಯಗೊಳ್ಳುತ್ತದೆ. ಈ ಅವಧಿಯಲ್ಲಿ ಸದಸ್ಯರು ವಿದ್ಯುನ್ಮಾನ ರೂಪದಲ್ಲಿ ತಮ್ಮ ಮತಗಳನ್ನು ಚಲಾಯಿಸಬಹುದು. ಆ ನಂತರ, ದೂರದ ಇ-ಮತದಾನ ವಿಧಾನವನ್ನು ಸೆಂಟ್ರಲ್ ಡೆಪಾಸಿಟರಿ ಸರ್ವೀಸಸ್ ಲಿಮಿಟೆಡ್ (ಸಿಡಿಎಸ್‌ಎಲ್) ಸಂಸ್ಥೆಯು ನಿಷ್ಕ್ರಿಯಗೊಳಿಸುತ್ತದೆ.

ಮೇಲೆ ತಿಳಿಸಿದ ದಿನಾಂಕದಾಚೆ ಇ-ಮತದಾನಕ್ಕೆ ಅವಕಾಶವಿಲ್ಲ. ಸಂಸ್ಥೆಯ ಈಕ್ವಿಟಿ ಶೇರುಗಳನ್ನು ಹೊಂದುವ ಮತ್ತು ಆಗಸ್ಟ್ 31, 2018ರ ದಿನಾಂಕದಂದು ನಿಗದಿಪಡಿಸಲಾದ ಶೇರುಗಳನ್ನು ಹೊಂದಿ, ವಾರ್ಷಿಕ ವರದಿಯನ್ನು ಪಡೆದುಕೊಂಡಿರುವಂತಹ ಸದಸ್ಯರು ನಮ್ಮ ಆರ್‌ಟಿಎ, ಅಂದರೆ, ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್‌ಅನ್ನು ನಂ. 30, ರಮಣ ರೆಸಿಡೆನ್ಸಿ, 4ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003 ವಿಳಾಸದಲ್ಲಿ ಮತ್ತು ದೂರವಾಣಿ ಸಂಖ್ಯೆ+91 80-23460815-818; ಫ್ಯಾಕ್ಸ್:+91-80-23460819ದಲ್ಲಿ ಅಥವಾ ಇ-ಮೇಲ್ irg@integrated.inದಲ್ಲಿ ಸಂಪರ್ಕಿಸಿ ವಾರ್ಷಿಕ ವರದಿಯ ಪ್ರತಿಯನ್ನು ಪಡೆದುಕೊಳ್ಳಬಹುದು.

ದೂರದ ಇ-ಮತದಾನದ ಮೂಲಕ ಮತ ಚಲಾಯಿಸಿರದ ಸದಸ್ಯರು ವಾರ್ಷಿಕ ಮಹಾಸಭೆಯಲ್ಲಿ ತಮ್ಮ ಹಕ್ಕುಗಳನ್ನು ಚಲಾಯಿಸಬಹುದು. ಈ ವಿಷಯಕ್ಕೆ ಕುರಿತಂತೆ ಸಂಸ್ಥೆಯು ವಾರ್ಷಿಕ ಮಹಾಸಭೆ ನಡೆಯುವ ಸ್ಥಳದಲ್ಲಿ ಬ್ಯಾಲಟ್ ಕಾಗದಗಳ ಏರ್ಪಾಟುಗಳನ್ನು ಮಾಡಿರುತ್ತದೆ. ಒಬ್ಬ ಸದಸ್ಯರು ದೂರದ ಇ-ಮತದಾನದ ಮೂಲಕ ತಮ್ಮ ಹಕ್ಕನ್ನು ಚಲಾಯಿಸಿದ್ದರೂ ಅವರು ಸಭೆಯಲ್ಲಿ ಭಾಗವಹಿಸಬಹುದು, ಆದರೆ, ಸಭೆಯಲ್ಲಿ ಮತ್ತೊಮ್ಮೆ ಮತ ಚಲಾಯಿಸುವ ಅಧಿಕಾರ ಅವರಿಗಿರುವುದಿಲ್ಲ. ಆಗಸ್ಟ್ 31, 2018ರಂದು ಸದಸ್ಯರ ನೋಂದಣಿ ಪುಸ್ತಕ/ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ಹೆಸರಿರುವ ಸದಸ್ಯರು 2018 ಜುಲೈ 30, ದಿನಾಂಕದಂದು ಈ ಸೂಚನೆಯಲ್ಲಿ ತಿಳಿಸಲಾಗಿರುವಂತೆ ಇರುವ ಗೊತ್ತುವಳಿಗಳಿಗೆ ಮತಚಲಾಯಿಸುವ ಹಕ್ಕನ್ನು ಹೊಂದಿರುತ್ತಾರೆ.

ಯಾವುದೇ ಪ್ರಶ್ನೆಗಳಿದ್ದಲ್ಲಿ, ಸದಸ್ಯರು ಸದಸ್ಯರಿಗಾಗಿ ಇರುವ ಪದೇಪದೇ ಕೇಳಲಾಗುವ ಪ್ರಶ್ನೆಗಳನ್ನು (FAQs) ನೋಡಬಹುದು ಮತ್ತು **https://www.evotingindia.com/userdocs/FAQs.pdf** ದ ಡೌನ್‌ಲೋಡ್ ವಿಭಾಗದಲ್ಲಿ ಲಭ್ಯವಿರುವ ಸದಸ್ಯರ ಇ-ಮತದಾನ ಕೈಪಿಡಿಯನ್ನು ನೋಡಬಹುದು ಅಥವಾ ಸಿಡಿಎಸ್‌ಎಲ್‌ನ ಸಹಾಯಕ ವ್ಯವಸ್ಥಾಪಕರಾದ ಶ್ರೀ ಮೆಹೂಬ್ ಲಖಾನಿ ಅವರನ್ನು ಸಂಪರ್ಕಿಸಬಹುದು ಅಥವಾ ಸಂಖ್ಯೆ 18002005533ಗೆ ಉಚಿತ ಕರೆ ಮಾಡಬಹುದು.

ಸೆಪ್ಟೆಂಬರ್ 8, 2018ರಂದು ನಡೆಯಲಿರುವ ವಾರ್ಷಿಕ ಮಹಾಸಭೆಯಲ್ಲಿ ಮಂಡಿಸಲಾದ ತೀರ್ಮಾನಗಳ ಕುರಿತು ಸದಸ್ಯರಿಗೆ ಮಾಹಿತಿ ಒದಗಿಸುವುದಕ್ಕಾಗಿ ಮತ್ತು ಬಿಎಸ್‌ಇ ಲಿಮಿಟೆಡ್‌ಗೆ ಸಂವಹಿಸುವುದಕ್ಕಾಗಿ, ಅವು ಮಂಡಿಸಲಾದ 48 ಘಂಟೆಗಳೊಳಗೆ, ಇ-ಮತದಾನದ ಫಲಿತಾಂಶಗಳು ಮತ್ತು ವಾರ್ಷಿಕ ಮಹಾಸಭೆಯಲ್ಲಿ ನಡೆಯುವ ಮತದಾನಗಳ ಫಲಿತಾಂಶಗಳನ್ನು, ಪರಿಶೋಧಕರ ವರದಿಯ ಜೊತೆಗೆ, ಸಂಸ್ಥೆಯ ವೆಬ್‌ಸೈಟ್‌ದಲ್ಲಿ ಮತ್ತು ಸೆಂಟ್ರಲ್ ಡೆಪಾಸಿಟರಿ ಸರ್ವೀಸಸ್ ಲಿಮಿಟೆಡ್ (ಸಿಡಿಎಸ್‌ಎಲ್) ನ ವೆಬ್‌ಸೈಟ್ (**https://www.evotingindia.com**) ದಲ್ಲಿ ಪ್ರಕಟಿಸಲಾಗುವುದು.

ಪುಸ್ತಕ ಮುಕ್ತಾಯ: 2018 ಮಾರ್ಚ್ 31ರಂದು ಅಂತ್ಯಗೊಂಡ ಆರ್ಥಿಕ ವರ್ಷಕ್ಕಾಗಿ ಈಕ್ವಿಟಿ ಶೇರುಗಳ ಮೇಲಿನ ಲಾಭಾಂಶವನ್ನು (ಅದು ವಾರ್ಷಿಕ ಮಹಾಸಭೆಯಲ್ಲಿ ನಿರ್ಣಯಿಸಲ್ಪಟ್ಟರೆ) ಪಡೆಯಲು ಅರ್ಹರಿರುವ ಶೇರುದಾರರನ್ನು ನಿರ್ಧರಿಸುವ ಸಲುವಾಗಿ, ಕಂಪನಿಗಳ ಕಾಯಿದೆ 2013ದ ಅನುಚ್ಛೇದ 91 ಹಾಗು ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ತಿದ್ದುಪಡಿ ನಿಯಮಗಳು 2015ದ ನಿಯಮ 10ರ ಅನುಸರಣೆಯಲ್ಲಿ, ಸದಸ್ಯರ ನೋಂದಣಿ ಪುಸ್ತಕ ಹಾಗು ಸಂಸ್ಥೆಯ ಶೇರು ವರ್ಗಾವಣೆ ಪುಸ್ತಕಗಳು 2018 ಸೆಪ್ಟೆಂಬರ್ 2 (ಭಾನುವಾರ) ರಿಂದ 2018 ಸೆಪ್ಟೆಂಬರ್ 8 (ಶನಿವಾರ)ದವರೆಗೆ (ಎರಡೂ ದಿನಗಳು ಒಳಗೊಂಡಂತೆ) ಮುಚ್ಚಲಾಗಿರುತ್ತದೆ ಎಂದು ಈ ಮೂಲಕ ಸೂಚನೆ ನೀಡಲಾಗುತ್ತಿದೆ.

ಸುನಿಲ್ ಆಗ್ರೋ ಫುಡ್ಸ್ ಲಿಮಿಟೆಡ್ ಪರವಾಗಿ
ಪ್ರಮೋದ್ ಕುಮಾರ್ ಎಸ್. ಕಾರ್ಯಕಾರಿ ನಿರ್ದೇಶಕರು
DIN: 00719828

ಸ್ಥಳ : ಬೆಂಗಳೂರು
ದಿನಾಂಕ: 18-08-2018